ಫ್ಯಾಕ್ಸ್ : 0816-2255761
ದೂರವಾಣಿ : 2272280

# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103

## ಅಂತಿಮ ವಿನ್ಯಾಸ ಅನುಮೋದನೆ ಆದೇಶ

**ವಿಷಯ :** ತುಮಕೂರು ನಗರದ **ಕಸಬಾ** ಗ್ರಾಮದ ಸರ್ವೆ ನಂಬರ್ **8** ರಲ್ಲಿ **ಒಟ್ಟು 4 ಎಕರೆ 25 ಗುಂಟೆ** ಪೈಕಿ **4 ಎಕರೆ 11.5** ಗುಂಟೆ ಪ್ರದೇಶಕ್ಕೆ (0-13.5 ಗುಂಟೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ) ವಾಸದ ಉಪಯೋಗಕ್ಕೆ ಅಂತಿಮ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಬಗ್ಗೆ.

**ಉಲ್ಲೇಖ :**

1. ಶ್ರೀ ಜಿ.ಎಸ್.ಬಸವರಾಜು ಮತ್ತು ಇತರರುಗಳ ಮನವಿ ದಿನಾಂಕ **14-03-2011**
2. ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ **ಎಎಲ್‌ಎನ್(ಟಿಎಂಕೆ)/ಸಿಆರ್/256/2010-11 ದಿನಾಂಕ 30-10-2010**
3. ದಿನಾಂಕ **26-04-2011** ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **10** ರ ನಿರ್ಣಯ
4. ಪ್ರಾಧಿಕಾರಕ್ಕೆ ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ಮತ್ತು ಸ್ಲಂಸೆಸ್ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ **21468 ರೂ.98,245** (ತ್ತೊಂಭತ್ತೆಂಟು ಸಾವಿರದ ಎರಡು ನೂರ ನಲವತ್ತೈದು ರೂಪಾಯಿಗಳು ಮಾತ್ರ) ದಿನಾಂಕ **20-05-2011** ಮತ್ತು ಮೇಲ್ವಿಚಾರಣಾ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ **22689 ರೂ.3,55,800** (ಮೂರು ಲಕ್ಷದ ಐವತ್ತೈದು ಸಾವಿರದ ಎಂಟು ನೂರು ರೂಪಾಯಿಗಳು ಮಾತ್ರ) ದಿನಾಂಕ **09-11-2012**
5. ಈ ಕಛೇರಿಯ ಪರಿಷ್ಕೃತ ಪ್ರಾಥಮಿಕ ಅನುಮೋದನೆ ಆದೇಶ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/167/2010-11 ದಿನಾಂಕ 16-07-2011
6. ಪ್ರಾಥಮಿಕ ಅನುಮೋದನೆ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಿರುವ ಬಗ್ಗೆ ತಾಂತ್ರಿಕ ವಿಭಾಗದ ದೃಢೀಕರಣ ದಿನಾಂಕ 20-06-2012
7. ಅರ್ಜಿದಾರರು ದಿನಾಂಕ 20-06-2012 ರಂದು ಸಲ್ಲಿಸಿರುವ ಮನವಿ ಪತ್ರ
8. ದಿನಾಂಕ **26-06-2012** ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **46** ರ ನಿರ್ಣಯ
9. ರಸ್ತೆಗಳ ಪ್ರದೇಶವನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೊಂದಾಯಿಸಿ ಕೊಟ್ಟಿರುವ ಪರಿಷ್ಕೃತ ದಾನಪತ್ರದ ದಸ್ತಾವೇಜು ನಂ.**9257** ದಿನಾಂಕ **04-08-2012**
10. ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005

* * * * *

**ಪ್ರಸ್ತಾವನೆ :-**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿನ ಅರ್ಜಿದಾರರ ಮನವಿಯಲ್ಲಿ ತುಮಕೂರು ನಗರದ **ಕಸಬಾ** ಗ್ರಾಮದ ಸರ್ವೆ ನಂಬರ್ **8** ರಲ್ಲಿ **ಒಟ್ಟು 4 ಎಕರೆ 25 ಗುಂಟೆ** ಪೈಕಿ **4 ಎಕರೆ 11.5** ಗುಂಟೆ

ಪ್ರದೇಶಕ್ಕೆ (0-13.5 ಗುಂಟೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ) ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ಕೋರಲಾಗಿದೆ.

ಉಲ್ಲೇಖ (3) ರ ನಿರ್ಣಯದಂತೆ, ಉಲ್ಲೇಖ (4) ರಲ್ಲಿ ಅರ್ಜಿದಾರರು ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ (5) ರಲ್ಲಿ ಪ್ರಸ್ತಾವಿತ ಪ್ರದೇಶಕ್ಕೆ ಪ್ರಾಧಿಕಾರದಿಂದ ಪ್ರಾಥಮಿಕ ಅನುಮೋದನೆ ವಿನ್ಯಾಸ ನಕ್ಷೆ ತಯಾರಿಸಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಶೇಕಡ 60 ರಷ್ಟು ನಿವೇಶನಗಳನ್ನು ಮಾರಟಕ್ಕೆ ಬಿಡುಗಡೆ ಮಾಡಲಾಗಿತ್ತು. ಉಲ್ಲೇಖ (6) ರಲ್ಲಿ ಪ್ರಸ್ತಾವಿತ ವಿನ್ಯಾಸದ ಡಾಂಬರೀಕರಣ, ಸಿವಿಲ್ ಅಭಿವೃದ್ಧಿ ಕೆಲಸಗಳು, ನೀರು ಸರಬರಾಜು ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ಉದ್ಯಾನವನಕ್ಕೆ ಚೈನ್‌ಲಿಂಕ್ ಫೆನ್ಸಿಂಗ್, ವಿದ್ಯುತ್ ವ್ಯವಸ್ಥೆ ಮುಂತಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ ಎಂಬುದಾಗಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ತಾಂತ್ರಿಕ ವಿಭಾಗ ಮತ್ತು ಯೋಜನಾ ಶಾಖೆಯು ತಿಳಿಸಿರುತ್ತದೆ. ಉಲ್ಲೇಖ (7) ರಂತೆ ವಿನ್ಯಾಸದಾರರಾದ ಶ್ರೀ ಜಿ.ಎಸ್.ಬಸವರಾಜು ಮತ್ತು ಇತರರು ಅರ್ಜಿ ಸಲ್ಲಿಸಿ, ದಿನಾಂಕ 16-07-2011 ರಂದು ಅನುಮೋದನೆಯಾಗಿರುವ ಸರ್ವೆ ನಂಬರ್‌ನ ವಿನ್ಯಾಸದ ವಿಸ್ತೀರ್ಣವು 4 ಎಕರೆ 25 ಗುಂಟೆ ಆಗಿದ್ದು, ಅಳತೆ ನಂತರ ಈ ವಿಸ್ತೀರ್ಣವು 4 ಎಕರೆ 11.5 ಗುಂಟೆ ಆಗಿರುತ್ತದೆ. ಉಳಿದ 0-13.5 ಗುಂಟೆ ಪ್ರದೇಶವು ಒತ್ತುವರಿಯಾಗಿದ್ದು, ವಿನ್ಯಾಸ ರಚನೆ ಸಾಧ್ಯವಾಗಿರುವುದಿಲ್ಲ. ಆದುದರಿಂದ ಈ ವಿನ್ಯಾಸವನ್ನು 4 ಎಕರೆ 11.5 ಗುಂಟೆ ಪ್ರದೇಶಕ್ಕೆ ಅಂತಿಮ ವಿನ್ಯಾಸ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಉಲ್ಲೇಖ (9) ರಲ್ಲಿ ರಸ್ತೆಗಳ ಪ್ರದೇಶವನ್ನು ದಾನಪತ್ರದ ಮೂಲಕ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾಕ್ಕೆ ಹಸ್ತಾಂತರಿಸಲಾಗಿರುತ್ತದೆ. ಆದುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2) ರನ್ವಯ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರಂತೆ 4 ಎಕರೆ 11.5 ಗುಂಟೆ ಪ್ರದೇಶಕ್ಕೆ ಅಂತಿಮ ವಿನ್ಯಾಸ ಅನುಮೋದನೆ ನೀಡಬಹುದಾಗಿದೆ. ಉಲ್ಲೇಖ (10) ರ ಸರ್ಕಾರದ ಸುತ್ತೋಲೆಯಂತೆ ವಿನ್ಯಾಸದ ಶೇಕಡ 60 ರಷ್ಟು ನಿವೇಶನಗಳು ಅಂದರೆ 02, 03, 04, 05, 06, 07, 10, 11, 12, 13, 14, 15, 18, 19, 20, 21, 22, 23, 26, 27, 28, 29, 30, 31, 34, 35, 36, 37, 38, 39, 40, 51, 52 ಮತ್ತು 53 ಒಟ್ಟು **34** ನಿವೇಶನಗಳನ್ನು ಉಲ್ಲೇಖ (5) ರ ಪ್ರಾಧಿಕಾರದ ಆದೇಶದಂತೆ ಬಿಡುಗಡೆಗೊಳಿಸಲಾಗಿತ್ತು. ಈ ಬಿಡುಗಡೆಗೊಂಡ ನಿವೇಶನಗಳ ಪೈಕಿ ನಿವೇಶನ ಸಂಖ್ಯೆ 52 ರ ಅಳತೆ 10.67ಮೀ.X12.20ಮೀ. ಹಾಗೂ 53 ರ ಅಳತೆ 22.86ಮೀ.X12.20ಮೀ., ಇದ್ದು, ಈ ನಿವೇಶನಗಳ ಅಳತೆಗಳು ಅಂತಿಮ ವಿನ್ಯಾಸ ನಕ್ಷೆಯಲ್ಲಿ ನಿವೇಶನ ಸಂಖ್ಯೆ 52 ರ ಅಳತೆ 12.20ಮೀ.X12.20ಮೀ. ಹಾಗೂ 53 ರ ಅಳತೆ 24.39ಮೀ.X12.20ಮೀ., ಇರುತ್ತದೆ. ಉಲ್ಲೇಖ (7) ರಲ್ಲಿ ಅಂತಿಮ ವಿನ್ಯಾಸ ಅನುಮೋದನೆಗೆ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಅದರಂತೆ ಉಳಿದ ಶೇಕಡ 40 ರಷ್ಟು ನಿವೇಶನಗಳು ಅಂದರೆ 01, 08, 09, 16, 17, 24, 25, 32, 33, 41, 42, 43, 44, 45, 46, 47, 48, 49, 50, 57, 54, 55 ಮತ್ತು 56 ಒಟ್ಟು **23** ನಿವೇಶನಗಳನ್ನು ಬಿಡುಗಡೆಗೊಳಿಸಿ ಅಂತಿಮ ವಿನ್ಯಾಸ ಅನುಮೋದನೆಯಾಗಬೇಕಾಗಿದ್ದು, ಕೆಳಕಂಡಂತೆ ಆದೇಶಿಸಿದೆ.

...ವೃದ್ಧಿ ಪ್ರಾಧಿಕಾರದ ಕಛೇರಿ
...ಗುಂಬ ರಸ್ತೆ, ತುಮಕೂರು.

ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/167/2011-12
ಅಂತಿಮ ವಿನ್ಯಾಸ ನಕ್ಷೆ ದೃಢೀಕರಣ

ದಿನಾಂಕ : 04-08-2012

## ಆದೇಶ

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ /

2005 ದಿನಾಂಕ 26-05-2005 ರಂತೆ ತುಮಕೂರು ನಗರದ **ಕಸಬಾ** ಗ್ರಾಮದ ಸರ್ವೆ ನಂಬರ್ **8** ರಲ್ಲಿ **ಒಟ್ಟು 4 ಎಕರೆ 25 ಗುಂಟೆ** ಪೈಕಿ **4 ಎಕರೆ 11.5** ಗುಂಟೆ (0-13.5 ಗುಂಟೆ ಒತ್ತುವರಿ ಪ್ರದೇಶವನ್ನು ಹೊರತುಪಡಿಸಿ) ಪ್ರದೇಶದಲ್ಲಿ ರಚಿಸಲಾಗಿರುವ ವಸತಿ ಉದ್ದೇಶದ ವಿನ್ಯಾಸವನ್ನು ಅಂತಿಮವಾಗಿ ಅನುಮೋದಿಸಿದೆ. ಈ ವಿನ್ಯಾಸದಲ್ಲಿನ ಶೇಕಡ 40 ರಷ್ಟು ನಿವೇಶನಗಳ ಸಂಖ್ಯೆ ಅಂದರೆ 01, 08, 09, 16, 17, 24, 25, 32, 33, 41, 42, 43, 44, 45, 46, 47, 48, 49, 50, 57, 54, 55 ಮತ್ತು 56 ಒಟ್ಟು 23 ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಅಂತಿಮ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆಯು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

**ನಿಂಬಧನೆಗಳು:-**

1. ವಿನ್ಯಾಸದಲ್ಲಿನ ನಿವೇಶನಗಳನ್ನು ಅನುಮೋದಿಸಲಾದ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು. ನಿವೇಶನಗಳನ್ನು ಉಪವಿಭಜಿಸುವುದು / ಒಟ್ಟು ಗೂಡಿಸುವುದನ್ನು, ಅಳತೆಗಳನ್ನು ಮಾರ್ಪಾಡು ಮಾಡುವುದನ್ನಾಗಲೀ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಮಾಡತಕ್ಕದ್ದಲ್ಲ.
2. ವಿನ್ಯಾಸದಲ್ಲಿ ವಸತಿಗಾಗಿ **9005.53** ಚ.ಮೀ. (ಶೇಕಡ **51.95**); ರಸ್ತೆಗಳಿಗೆ **4995.00** ಚ.ಮೀ. (ಶೇಕಡ **28.81**); ಉದ್ಯಾನವನ ಜಾಗಕ್ಕೆ **1959.00** ಚ.ಮೀ. (ಶೇಕಡ **11.30**); ಸಿ.ಎ.ನಿವೇಶನ ಜಾಗಕ್ಕೆ **880.00** ಚ.ಮೀ. (ಶೇಕಡ **5.08**); ವಾಣಿಜ್ಯ ಪ್ರದೇಶಕ್ಕೆ **513.00** ಚ.ಮೀ. (ಶೇಕಡ **2.96**); ಪ್ರದೇಶ ನಿಗಧಿಪಡಿಸಿದೆ. ವಸತಿ ವಿಸ್ತೀರ್ಣದಲ್ಲಿ ಅನುಮೋದಿತ ನಕ್ಷೆಯಲ್ಲಿ ತೋರಿಸಿರುವಂತೆ ಅನಿಯಮಿತ ಅಳತೆಯ **18** ನಿವೇಶನಗಳಿರುತ್ತವೆ.
3. ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಮೊದಲು ಸ್ಥಳೀಯ ಸಂಸ್ಥೆಯಿಂದ ಅಗತ್ಯ ಕಟ್ಟಡ ಪರವಾನಗಿ / ಪ್ರಾರಂಭಿಕ ಪ್ರಮಾಣ ಪತ್ರ ಪಡೆದು ಅನುಮೋದಿತ ಕಟ್ಟಡ ನಕ್ಷೆಯಂತೆಯೇ ಕಟ್ಟಡ ನಿರ್ಮಿಸತಕ್ಕದ್ದು.
4. ಮೇಲ್ಕಂಡ ಯಾವುದೇ ನಿಬಂಧನೆಯನ್ನಾದರೂ ಪಾಲಿಸದೇ ಇದ್ದಲ್ಲಿ; ನೀಡಲಾದ ಮಾಹಿತಿ / ದಾಖಲಾತಿ ತಪ್ಪು ಎಂದು ಕಂಡು ಬಂದಲ್ಲಿ ವಿನ್ಯಾಸವನ್ನು ಯಾವುದೇ ತಿಳುವಳಿಕೆ ನೀಡದೇ ರದ್ದುಪಡಿಸುವ ಅಥವಾ ಇತರೇ ಯಾವುದೇ ನಿಬಂಧನೆ ವಿಧಿಸುವ ಅಧಿಕಾರ ಪ್ರಾಧಿಕಾರಕ್ಕೆ ಇರುತ್ತದೆ.
5. ವಿನ್ಯಾಸ ಪ್ರದೇಶದ ಗಡಿಗಳು, ನಿವೇಶನದ ಗಡಿಗಳಿಗೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರು ಉಂಟಾದಲ್ಲಿ ವಿನ್ಯಾಸ/ನಿವೇಶನ ಮಾಲೀಕರೇ ತಮ್ಮ ಸ್ವಂತ ಜವಾಬ್ದಾರಿಯಲ್ಲಿ ಬಗೆಹರಿಸಿಕೊಳ್ಳತಕ್ಕದ್ದು ಹಾಗೂ ಈ ಅನುಮತಿಯ ಸಿವಿಲ್ ವ್ಯಾಜ್ಯಗಳಿಗೆ ಹೊರತಾಗಿದೆ.

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

**ಗೆ,**

**ಶ್ರೀ ಜಿ.ಎಸ್.ಬಸವರಾಜು** ಬಿನ್ ಲೇ|| ಸಿದ್ದಪ್ಪ,
**ಶ್ರೀಮತಿ ಎಸ್.ಶಕುಂತಲ** ಕೋಂ ಜಿ.ಎಸ್.ಬಸವರಾಜು
**ಶ್ರೀ ಜಿ.ಬಿ.ಜ್ಯೋತಿಗಣೇಶ್** ಬಿನ್ ಜಿ.ಎಸ್.ಬಸವರಾಜು,
**ಡಾ|| ಜಿ.ಬಿ.ಅಶೋಕ್** ಬಿನ್ ಜಿ.ಎಸ್.ಬಸವರಾಜು (ಜಿ.ಪಿ.ಎ.ಹೋಲ್ಡರ್),
**ಶ್ರೀ ಜೆ.ನವೀನ್** ಬಿನ್ ಜಗದೀಶ್, ಗಾಂಧಿನಗರ, ತುಮಕೂರು
**ಶ್ರೀ ಚಂದ್ರಯ್ಯ** ಬಿನ್ ಗುಬ್ಬಿರಾಜಣ್ಣ, ಬೆಳಗುಂಬ ರಸ್ತೆ, ತುಮಕೂರು

**ಪ್ರತಿಯನ್ನು :-**

1. ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಗೆ ವಿನ್ಯಾಸ ನಕ್ಷೆಯೊಂದಿಗೆ ರವಾನಿಸುತ್ತಾ ವಿನ್ಯಾಸದ ನಕ್ಷೆಯಂತೆ ನಿಯಮಾನುಸಾರ ನಿವೇಶನಗಳ ಖಾತಾ ಮಾಡಬಹುದು ಹಾಗೂ ಕಟ್ಟಡ ನಿರ್ಮಾಣಕ್ಕೆ ಅನುಮತಿಸಬಹುದೆಂದು ತಿಳಿಸಲಾಗಿದೆ.
2. ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಕಛೇರಿ ಪ್ರತಿ.







# INDEX

| SIZE IN mtrs | SITE NO'S | TOTAL NO:OF SITES |
|---|---|---|
| 9.14x12.20 | 2,3,6,7 | 4 |
| 9.14x15.24 | 10,11,14,15,19,18,22, 23,26,27,30,31,34,35,40 | 15 |
| 15.24x12.20 | 4,5 | 2 |
| 12.20x15.24 | 12,13,20,21,28,29,36,37 | 8 |
| 10.36x15.24 | 17 , 32, 38,39 | 4 |
| 12.20x12.20 | 51 & 52 | 2 |
| 24.39x12.20 | 53 | 1 |
| 24.39x10.52 | 54,55 | 2 |
| 25.0 X 15.24 | 56 | 1 |
| ODD | 1,8,9,16,24,25,33,41,42,43, 44,45,46,47,48,49,50,57 | 18 |
| GRAND TOTAL | 57 | 57 |

# LAND USE ANALYSIS

| USE | AREA IN SQ M | % |
|---|---|---|
| RESIDENTIAL | 9013.00 | 51.95 |
| COMMERCIAL | 513.00 | 2.96 |
| PARK | 1959.00 | 11.29 |
| C.A | 880.00 | 5.07 |
| ROADS | 4985.00 | 28.73 |
| TOTAL | 17350.00 | 100.00 |

OWNER : G.S.BASAVARAJ AND OTHERS

# GOVERNMENT OF KARNATAKA

TUMKUR URBAN DEVELOPMENT AUTHORITY

TUMKUR

30/7/12
TOWN PLANNING MEMBER
T U D A
TUMKUR

COMMISSIONER
T U D A
TUMKUR

DRN BY | CKD BY | DRG NO

TITTLE

## APPROVED RESIDENTIAL LAY OUT PLAN IN SY NO 8 OF TUMKUR KASABA TUMKUR

EXTENT : 4 Acre - 11.5 Guntas Out of 4 Acre - 25 Guntas .
Encroached area of 13.5 Guntas is excluded from the layout plan.